ಬುಡಕಟ್ಟು ಜನಾಂಗದ ಏಳಿಗೆಗಾಗಿ ನೀಡಲಾದ ಹಣದ ಬಗ್ಗೆ

೨೫೭. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕಾನೂನು ಮಂತ್ರಿ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ೧೯೯೦-೯೧ನೇ ಸಾಲಿನಲ್ಲಿ ಬುಡಕಟ್ಟು ಜನಾಂಗದ ಏಳಿಗೆಗಾಗಿ (ಟ್ರೈಬಲ್ ವೆಲ್‌ಫೇರ್) ನೀಡಲಾದ ಹಣವೆಷ್ಟು ?

ಆ) ಇದುವರೆವಿಗೂ ವಿಚ್ಚಾದ ಹಣವೆಷ್ಟು ?

ಇ) ಈ ಕಾರ್ಯಕ್ರಮಗಳಲ್ಲಿ ಹಣದ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಶಿವಣ್ಣ (ಕಾನೂನು ಮಂತ್ರಿ ಸಮಾಜ ಕಲ್ಯಾಣ ಸಚಿವರು).—

ಅ) ಗಿರಿಜನ ಉಪಯೋಜನೆಯಡಿಯಲ್ಲಿ ೧೯೯೦-೯೧ನೇ ಸಾಲಿಗೆ ನಿಗದಿ ಪಡಿಸಿದ ಹಣ (ರೂ. ಲಕ್ಷಗಳಲ್ಲಿ)

ರಾಜ್ಯ ಯೋಜನೆ	ಜಿಲ್ಲಾ ಯೋಜನೆ	ವಿಶೇಷ ಕೇಂದ್ರೀಯ ಸಹಾಯ ಧನ	ಒಟ್ಟು
೮೪೩.೦೦	೨೫೨.೫೬	೧೬೨.೮೦	೧೨೫೮.೩೬

ಆ) ೪೮.೬೩ ೯೫.೨೮ ೪,೮೨ ೧೪೮.೬೩

ಇ) ಇಲ್ಲ.

ರಾಜ್ಯದಲ್ಲಿರುವ ಅಂಗನವಾಡಿ ಹಾಗೂ ಬಾಲವಾಡಿ ಕೇಂದ್ರಗಳ ಬಗ್ಗೆ.

೨೫೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕಾನೂನು ಮಂತ್ರಿ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಅಂಗನವಾಡಿ ಹಾಗೂ ಬಾಲವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇವುಗಳಲ್ಲಿ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ ?

ಇ) ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರವೇನಾದರೂ ಕಾರ್ಯಕ್ರಮಗಳನ್ನು ರೂಪಿಸಿಡಯೇ ?